

ಚಿತ್ರ: ಸೃಜನ್

# ದಾಹ ಮತ್ತು ನದಿ

ಹೀಗೆ ಒಮ್ಮೊಮ್ಮೆ
ನೀನು ನದಿಯನ್ನು ಉಟ್ಟುಕೊಂಡು
ನಡೆದು ಬರುತ್ತೀಯಾ
ದೀನನಾಗಿ ಕುಳಿತ ನನ್ನ ಬಳಿಗೆ

ನದಿಯನ್ನು ನೋಡಿ
ನನಗೆ ಅಚ್ಚರಿಯೆನಿಸುವುದಿಲ್ಲ
ಅದೇ ಬಳುಕು
ಅಲ್ಲಲ್ಲಿ ಕುಂಟು ತೆವಳು
ಬಯಲನ್ನು ನೆನೆಸಿ ಬಂದಂತ
ಮಹಾ ನಗು ಒಳಗೊಳಗೆ

ಜಾವದ ಚಳಿಯೊಂದು
ಬಿಸಿಲಿಗೆ ಮೈಯೊಡ್ಡುವಂತೆ
ನನ್ನೆದುರು ನದಿಯನ್ನು
ಕಳಚುತ್ತೀಯಾ
ಪೋರನೊಬ್ಬ ತುಂಡು ಬಳಪ
ಮೆಲ್ಲಗೆ ದೂರ ಎಸೆದಂತೆ

ತೀರದ ದಾಹವೊಂದು
ಇನ್ನೇನು ಕಸಿಯುವಂತೆ
ನದಿ ನನ್ನೆದೆಗೆ ಇಳಿಯುತ್ತಿದ್ದಂತೆ
ನೀನು ಮಾಯ
ಆಕಾಶಕಾಯಗಳೆಲ್ಲಾ ಒಮ್ಮೆಲೆ
ಮಳೆಗರೆದಂತೆ ಭಾಸ
ಹೇಳೀಗ ನೀನು
ದಾಹವೋ ನದಿಯೋ

● **ಶಶಿ ತರೀಕೆರೆ**